# ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ, ಆ. 5** - ಶಾಸ್ತ್ರ, ಸಂಪ್ರದಾಯ ನೋಡಿ ವಿವಾಹವಾದ ಎಷ್ಟೋ ಮದುವೆಗಳು ಮುರಿದುಬಿದ್ದಿವೆ. ಆದರೆ ಶ್ರೀಮಠದಲ್ಲಿ ಪ್ರತಿತಿಂಗಳು ನಡೆಯುವ ಎಲ್ಲ ವರ್ಗದವರ ವಿವಾಹ ಮಹೋತ್ಸವದಲ್ಲಿ ಮದುವೆಯಾದವರಿಗೆ ಏನೂ ತೊಂದರೆ ಆಗದೆ ಸತಿಪತಿಯರ ಮಧ್ಯೆ ವಿರಸ ಉಂಟಾಗದೆ ಉತ್ತಮ ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಸಹಯೋಗದಲ್ಲಿ ನಡೆದ ಮೂವತ್ತನೇ ವರ್ಷದ ಎಂಟನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀಗಳು, ಕಲ್ಯಾಣ ಮಹೋತ್ಸವ ಶ್ರೀಮಠದ ವಿಧಾಯಕವಾಗಿರುವ ಜನೋಪಯೋಗಿಯಾಗಿರುವ ಕಾರ್ಯಕ್ರಮವಾಗಿದ್ದು, ಅಂತರ್ಜಾತಿ, ಅಂತರ್ಧರ್ಮೀಯ ವಿವಾಹಗಳು ನಡೆದಿವೆ. ಇಲ್ಲಿನ ಪ್ರಗತಿಪರ ಚಿಂತನೆಗಳಿಗೆ ಜನರು ಒಗ್ಗಿಕೊಂಡಿದ್ದಾರೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ವಿಜಯಕುಮಾರ್ ಪಾಟೀಲ್ ಅವರ ಬರೆದಿರುವ ನೆಲದ ಹೊನಲು ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ರಾಣೇಬೆನ್ನೂರು ತಾಲ್ಲೂಕು ಮಾಳನಾಯಕನಹಳ್ಳಿಯ ಪ್ರತಿಭಾವಂತ ಬಡವಿದ್ಯಾರ್ಥಿನಿ ಕು| ಚಂದನಾ ವಿ.ಬ್ಯಾಳಿ ಇವರನ್ನು ಸನ್ಮಾನಿಸಲಾಯಿತು. ಅಲ್ಲದೇ ಶ್ರೀಗಳು ಈ ವಿದ್ಯಾರ್ಥಿನಿಗೆ ರಾಣೆಬೆನ್ನೂರಿನ ಎಸ್‌ಜೆಎಂವಿಬಿಎಜೆಎಸ್‌ಎಸ್ ಮಹಿಳಾ ಮಹಾವಿದ್ಯಾಲಯದಲ್ಲಿ ಉಚಿತವಾಗಿ ಮೂರುವರ್ಷಗಳ ಪದವಿ ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಿಕೊಟ್ಟಿರುವುದಾಗಿ ತಿಳಿಸಿದರು. ನಂತರ ಕ್ರಿಶ್ಚಿಯನ್ ವಧು-ಆದಿಕರ್ನಾಟಕ ವರ (ಅಂತರ್ಜಾತಿ ವಿವಾಹ) ಸೇರಿದಂತೆ 10 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಗಾಣಿಗ ಗುರುಪೀಠದ ಶ್ರೀ ಬಸವಕುಮಾರ ಸ್ವಾಮಿಗಳು ಗೌರವ ಉಪಸ್ಥಿತಿ ವಹಿಸಿದ್ದರು. ವೇದಿಕೆಯಲ್ಲಿ ಯಶವಂತರಾವ್ ಅಷ್ಟಗಿ, ಕಲ್ಯಾಣಕುಮಾರ ಶೀಲವಂತ, ರವೀಂದ್ರ ಭಟ್ನಳ್ಳಿ ಇದ್ದರು. ಶಿರಸಿ ರುದ್ರದೇವರ ಮಠದ ಮಲ್ಲಿಕಾರ್ಜುನ ಸ್ವಾಮಿಗಳು, ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಪ್ರೊ. ಸಿ.ಎಂ. ಚಂದ್ರಪ್ಪ ಸ್ವಾಗತಿಸಿದರು. ಬಸವರಾಜಶಾಸ್ತ್ರಿ ನಿರೂಪಿಸಿ ಶರಣು ಸಮರ್ಪಣೆ ಮಾಡಿದರು.







